ಮಟ್ಟಕ್ಕೆ ಕೂಡ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಮುಖ್ಯ ಮಂತ್ರಿಗಳು ಇದರ ಬಗ್ಗೆ ಏನು ಹೇಳಿಂತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಗುಲ್ಬರ್ಗ ಜಿಲ್ಲೆಯಲ್ಲಿ ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವುದು.

೨೨೫. ಶ್ರೀ ಕೆ. ಬಿ. ಶಾನಪ್ಪ (ಶಹಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಗೃಹ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಎ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ನಲವಾರ್ ಹಾಗೂ ಹೇರೂರು ಗ್ರಾಮಗಳಲ್ಲಿ ಹೊಸದಾಗಿ ಆರಕ್ಷಕ ಠಾಣೆಗಳನ್ನು ತೆರೆಯುವ ಬಗ್ಗೆ ಪ್ರಸ್ತಾವಗಳೇನಾದರೂ ಇವೆಯೇ ?

ಬಿ) ಹಾಗಿದ್ದಲ್ಲಿ ಯಾವಾಗ ಈ ಆರಕ್ಷಕ ಠಾಣೆಗಳನ್ನು ತೆರೆಯಲಾಗುವುದು.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಎ) ಗುಲ್ಬರ್ಗಾ ಜಿಲ್ಲೆಯ ನಲವಾರ್ ಮತ್ತು ಹೆರೂರು-ಬಿ ಗ್ರಾಮಗಳಲ್ಲಿ ಆರಕ್ಷಕ ಠಾಣೆಗಳನ್ನು ಸ್ಥಾಪಿಸುವ ಪ್ರಸ್ತಾವವಿಲ್ಲ. ಆದಾಗ್ಯೂ ನಲವಾರ್ ಮತ್ತು ಹೆರೂರು-ಬಿ ಗ್ರಾಮಗಳಲ್ಲಿ ಆರಕ್ಷಕ ಉಪಠಾಣೆಗಳನ್ನು (Out post) ಪರಿಶೀಲನೆಯಲ್ಲಿದೆ.

ಬಿ) ಸಾಧ್ಯವಾದಷ್ಟು ಬೇಗ ಈ ಉಪಠಾಣೆಗಳನ್ನು (Out post) ತೆರೆಯಲಾಗುವುದು.

ಶ್ರೀ ಯು. ಭೂಪತಿ (ಶ್ರೀ ಕೆ. ಬಿ. ಶಾಣಪ್ಪನವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಚಿತ್ತಾಪುರ ತಾಲ್ಲೂಕಿನ ನಲ್ವಾಲೆ ಗ್ರಾಮದಲ್ಲಿ ಅಪರಾಧಿಗಳ ಸಂಖ್ಯೆ ಬಹಳಷ್ಟಿ ಜಾಸ್ತಿಯಾಗಿದೆ. ಆದ್ದರಿಂದ ಅಲ್ಲಿ ಆರಕ್ಷಕ ಠಾಣೆಯನ್ನು ತೆರೆಯಬೇಕು. ಉಪಠಾಣೆಯನ್ನು ತೆರೆಯುವುದರಿಂದ ಪ್ರಯೋಜನವಾಗುವುದಿಲ್ಲ. ಆದಕಾರಣ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಅಲ್ಲಿಯ ಜನಸಂಖ್ಯೆ ೧೩೦೦. ಅಲ್ಲಿರುವ ಕಲ್ಲುಗಣಿ ಕೆಲಸಗಾರರ ಸಂಖ್ಯೆ ೫೦೦. ಕಾರ್ಮಿಕರು ಇದ್ದ ಕಡೆ ಗಲಾಟೆಗಳು ಇರುತ್ತವೆ. ಎಲ್ಲಾ ಕಡೆ ಒಂದೇ ಸಾರಿ ಪೋಲೀಸ್ ಸ್ಟೇಷನ್‌ಗಳನ್ನು ತೆರೆಯುವುದು ಕಷ್ಟವಾಗಬಹುದು. ಈಗ ಔಟ್‌ಪೋಸ್ಟ್ ಕೊಡುವುದಕ್ಕೆ ಪ್ರಸ್ತಾಪ ಬಂದಿದೆ. ಈಗ ಇದನ್ನು ಮಾಡೋಣ. ನಂತರ ಪೋಲೀಸ್ ಸ್ಟೇಷನ್ ಬಗ್ಗೆ ಬೇಕಾದರೆ ಯೋಚನೆ ಮಾಡೋಣ.

ಕರ್ನಾಟಕ ಆಹಾರ ನಾಗರೀಕ ಸರಬರಾಜು ನಿಗಮದವರ ಚಟುವಟಿಕೆಗಳು.

೧೦. ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆಹಾರ ಮತ್ತು ನಾಗರೀಕಸರಬರಾಜು ಮಂತ್ರಿಗಳು ದಯವಿಟ್ಟು ಉತ್ತರಿಸುವಿರೆ ?

ಎ) ಕರ್ನಾಟಕ ರಾಜ್ಯ ಆಹಾರ ನಿಗಮವು ಲೆವಿ ಪದ್ಧತಿ ಮತ್ತು ಪೂರುಕಟ್ಟೆ ಮೂಲಕ ಸಂಗ್ರಹಿಸಿದ ಆಹಾರ ಧಾನ್ಯಗಳ ಒಟ್ಟು ಪ್ರಮಾಣವು ಎಷ್ಟು;

ಆ) ಭಾರತ ಸರ್ಕಾರವು ನಮ್ಮ ರಾಜ್ಯಕ್ಕೆ ಪೂರೈಸುವ ಆಹಾರ ಧಾನ್ಯಗಳ ಪ್ರಮಾಣವೆಷ್ಟು, ಮತ್ತು ಯಾವ ಬೆಲೆಗಳಲ್ಲಿ;

ಇ) ಖಾಸಗಿ ನ್ಯಾಯಬೆಲೆ ಅಂಗಡಿಗಳವನ್ನು ರದ್ದುಗೊಳಿಸಿದ ನಂತರ ಸಮರ್ಪಕ ಮತ್ತು ದಕ್ಷ ವಿತರಣೆಗಾಗಿ ಕೈಗೊಂಡ ಕ್ರಮಗಳು ಯಾವುವು;

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಎ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಿಂದ ದಿನಾಂಕ ೧.೭.೮೫ರ ವರೆಗೆ ಸಂಗ್ರಹವಾದ ಪ್ರಮಾಣ :